ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2012ನೇ ಸಾಲಿನ ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ (ತಿದ್ದುಪಡಿ) ವಿಧೇಯಕವನ್ನು ದಿನಾಂಕ: 2.08.2012 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸ ಲಾಗಿದೆ ಎಂದು ತಿಳಿಸಿರುತ್ತಾರೆ.

9. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮುಂದುವರೆದ ಚರ್ಚೆ :

ವಿಷಯ : ರಾಜ್ಯದಲ್ಲಿರುವ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗ ಹಾಗೂ ಫಲಾನುಭವಿಗಳಿಗೆ ಸಿಗಬೇಕಾದ ಸೌಲಭ್ಯಗಳನ್ನು ಒಬ್ಬನೇ ಉಪಯೋ ಗಿಸುತ್ತಿದ್ದಾರೆಂದು ಪತ್ರಿಕಾ ಹೇಳಿಕೆ ಕುರಿತು ಮುಂದುವರೆದ ಚರ್ಚೆ :

ಅಧ್ಯಕ್ಷರು : ಮಾನ್ಯ ಸಚಿವರೆ, ಬಹಳ ಸಂಕ್ಷಿಪ್ತವಾಗಿ ಉತ್ತರ ಹೇಳಿ. ಸುಮ್ಮನೆ ಡೀಟೆಲ್ ಆಗಿ ಹೋಗಬೇಡಿ.

ಶ್ರೀ ಹೆಚ್.ಡಿ. ರೇವಣ್ಣ : ಈ ಮಾಹಿತಿ ಕಳುಹಿಸಿ ಕೊಡುತ್ತೇನೆ. ತನಿಖೆ ಮಾಡುವುದಕ್ಕೆ ಅವರಿಗೆ ಹೇಳಿ.

ಅಧ್ಯಕ್ಷರು : ಆಯಿತು.

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ನಾನು ಉತ್ತರವನ್ನು ಮುಂದುವರೆಸುತ್ತಿದ್ದೆನೆ, ಮತ್ತೆ ಹಿಂದಕ್ಕೆ ಹೋಗುವುದಿಲ್ಲ. ವಸೂಲಿ ಬಾಕಿ ಇರುವ ಹಣದ ಪ್ರಕರಣಗಳ ಸಂಖ್ಯೆ 4834 ಮತ್ತು ವಸೂಲಿ ಮಾಡಬೇಕಾ ಗಿರುವ ಮೊತ್ತ 107.32 ಕೋಟಿ ರೂಪಾಯಿ co-operative societyಯಿಂದ ವಸೂಲ್ಮಾಡಬೇಕಾಗಿದೆ. ಹಣ ದುರುಪಯೋಗ ಮಾಡಿದ್ದ ಕಾರಣಕ್ಕಾಗಿ ತೆಗೆದುಕೊಂಡು ಕ್ರಮಗಳು: ಅಮಾನತ್ತಿನಲ್ಲಿರಿಸಿರುವ ಸಿಬ್ಬಂದಿಗಳ ಸಂಖ್ಯೆ 860, ವಜಾ ಮಾಡಿರುವ ಸಿಬ್ಬಂದಿಗಳ ಸಂಖ್ಯೆ 2069, ಕಲಂ 29C ಪ್ರಕಾರ ಅನರ್ಹಗೊಳಿಸಿರುವ ವ್ಯಕ್ತಿಗಳ ಸಂಖ್ಯೆ 182, ಶಿಸ್ತಿನ ಕ್ರಮಕ್ಕೆ ಒಳಪಡಿಸಿ ರತಕ್ಕಂಥದ್ದು 543, ಕ್ರಿಮಿನಲ್ ಕ್ರಮ ಕೈಗೊಳ್ಳುವುದಕ್ಕೆ ಬಾಕಿ ಇರತಕ್ಕಂತದ್ದು

93, ದುರುಪಯೋಗದ ಮೊತ್ತ 100.99 ಕೋಟಿ ರೂಪಾಯಿ. ಇದೆಲ್ಲಾ entire Co-operative Societies ನಲ್ಲಿ ಆಗಿರುವಂಥದ್ದಾಗಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಪುಟ್ಟಸ್ವಾಮಿಯವರೆ, ಮಾನ್ಯ ರೇವಣ್ಣ ಹೇಳಿರುವ ಕೆ.ಎಂ.ಎಫ್. ಬಗ್ಗೆ ಹೇಳಿ ಎಂದರೆ ತಾವು ಬೇರೆ ಬೇರೆ ವಿಷಯ ಹೇಳುತ್ತಿದ್ದೀರಿ.

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಅದನ್ನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಆ ವಿಷಯಕ್ಕೆ ತಾವು ಬಂದಿಲ್ಲ. ತಾವು ಬೇರೆ ವಿಷಯ ಹೇಳುತ್ತಿದ್ದೀರಿ.

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಒಂದೊಂದಾಗಿ ಬರುತ್ತೇನೆ. ರಾಜ್ಯ ಗೃಹ ನಿರ್ಮಾಣ ಮಂಡಳಿ ಬಗ್ಗೆ ಮಾತನಾಡಿದ್ದರೆ. ರಾಜ್ಯದಲ್ಲಿ ಒಟ್ಟು ಗೃಹ ನಿರ್ಮಾಣ ಸಹಕಾರ ಸಂಘಗಳು 1499. ಕಾರ್ಯನಿರತರಾಗಿರುವ ಗೃಹ ನಿರ್ಮಾಣ ಸಹಕಾರ ಸಂಘಗಳು 1089 ಮತ್ತು ಸ್ಥಗಿತಗೊಂಡಿರುವುದು 183, ಒಟ್ಟು ಸದಸ್ಯರ ಸಂಖ್ಯೆ ಇರತಕ್ಕಂಥದು 7,96,167.

ಅಧ್ಯಕ್ಷರು : ಮಾನ್ಯ ಸಚಿವರೆ, ಕೆ.ಎಂ.ಎಫ್.ಗೆ ಸಂಬಂಧಪಟ್ಟಿರುವಂಥದ್ದು ಏನಾದರೂ ಇದ್ದರೆ ಹೇಳಿ ಮುಗಿಸಿ.

ಶ್ರೀ ಲಕ್ಷ್ಮಣ್ ಸವದಿ : ಮಾನ್ಯ ರೇವಣ್ಣನವರು ಏನೇನು ಕೇಳಿದ್ದಾರೆಯೋ ಅಷ್ಟಕ್ಕೆ ಮಾತ್ರ ಉತ್ತರ ಕೊಡಿ.

ಶ್ರೀ ಬಿ.ಜೆ. ಪುಟ್ಟಸ್ವಾಮಿ : Specific ಆಗಿ ನಮ್ಮ ರೇವಣ್ಣನವರು ಹೇಳಿದರು. ನಾನು ಮೊದಲೇ ಆ ಹಿನ್ನೆಲೆಯನ್ನು ಏತಕ್ಕೆ ಹೇಳಿದೆ ಎಂದರೆ,...

ಶ್ರೀ ಸಿದ್ದರಾಮಯ್ಯ : ಈಗ ನಮ್ಮ ರೇವಣ್ಣನವರೆಂದು ಹೇಳುತ್ತೀರಿ, ಮತ್ತೆ ಒಬ್ಬೊರಿಗೊಬ್ಬರು ಜಗಳ ಆಡುತ್ತೀರಿ ಇದು ಯಾವ ತರಹ?

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಅವರು ನಮ್ಮ ಪ್ರೀತಿಯ ರೇವಣ್ಣನವರು. ನಾನು ಈಗಾಗಲೇ ಓದಿದಂತಹ ಸಂಘಗಳು ಮತ್ತು ಗೃಹ ನಿರ್ಮಾಣ ಸಂಘಗಳಲ್ಲಿ ಆಗಿರತಕ್ಕಂಥ ಅವ್ಯವಹಾರಗಳ ಹಿನ್ನೆಲೆಯಲ್ಲಿ ಪತ್ರಕರ್ತರು ಕೇಳಿದ ಪ್ರಶ್ನೆಗಳಿಗೆ ನಾನು ಹೇಳಿರತಕ್ಕಂಥ ಉತ್ತರ ಒಂದೊಂದು ಪತ್ರಿಕೆಯಲ್ಲಿ ಒಂದೊಂದು ತರಹ ಬಂದಿದೆ. ಆದರೆ, ಕೆ.ಎಂ.ಎಫ್. ಬಗ್ಗೆ Specific ಆಗಿ ನನಗೆ ಕೇಳಿದ್ದರು. ಅದರ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಹೇಳಿದ್ದೇನೆ. ದಾಖಲೆ ಪ್ರಕಾರ 2001 ರಿಂದ 2008 ರವರೆಗಿನ ಆಡಿಟ್ ರಿಪೋರ್ಟ್‌ನಲ್ಲಿ ಮಾನ್ಯ ರೇವಣ್ಣನವರ ಹೆಸರು ನೇರವಾಗಿ ಪ್ರಸ್ತಾಪವಾಗಿದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾನು ಆರ್.ಟಿ.ಐ. ನಲ್ಲಿ ಮಾಹಿತಿ ತೆಗೆದುಕೊಂಡಿದ್ದೇನೆ.

ಶ್ರೀ ಬಿ.ಜೆ. ಪುಟಸ್ವಾಮಿ : ನಾನು ಪೂರ್ತಿ ಹೇಳುವವರೆಗೆ ದಯವಿಟ್ಟು ಕೇಳಿ. ನಾನು ಪೂರ್ತಿ ಹೇಳಿದ ನಂತರ ತಾವು ಹೇಳಿ. xxx xxx xxx xxx xxx.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇವರು ಹೇಳುತ್ತಿರುವ ವಿಚಾರ ಈಗಾಗಲೇ ಕೋರ್ಟ್‌ನಲ್ಲಿದೆ.

ಅಧ್ಯಕ್ಷರು : ಈ ವಿಷಯ ಕೋರ್ಟ್‌ನಲ್ಲಿದೆಯೇ?

ಶ್ರೀ ಬಿ.ಜೆ. ಪುಟ್ಟಸ್ವಾಮಿ : 100% ಕೋರ್ಟ್‌ನಲ್ಲಿದೆ.

ಅಧ್ಯಕ್ಷರು : ಕೋರ್ಟ್‌ನಲ್ಲಿದ್ದರೆ ಇಲ್ಲಿ ಹೇಳುವುದು ಬೇಡ.

ಶ್ರೀ ಬಿ.ಜೆ ಪುಟ್ಟಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಕೋರ್ಟ್‌ನ ಲ್ಲಿರುವ ವಿಚಾರ ಮಾತನಾಡುತ್ತಿಲ್ಲ. (ಗೊಂದಲ) ನನ್ನ ಮೇಲೆ ಏನು ಇಲ್ಲವೆಂದು ಇವರು ಹೇಳಿದ್ದರಿಂದ ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಕೋರ್ಟ್‌ನಲ್ಲಿರುವ ವಿಷಯ ಇಲ್ಲಿ ಚರ್ಚೆ ಮಾಡಬಹುದೆ?

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಮಾನ್ಯ ಅಧ್ಯಕ್ಷರೆ, ಕೋರ್ಟ್‌ನಲ್ಲಿದೆ. ಇವತ್ತು stay vacate ಆಗಿರಬಹುದು ಅಥವಾ ಚರ್ಚೆ ನಡೆಯುತ್ತಿರಬಹುದು. ತನಿಖೆ ಮಾಡುವುದಕ್ಕೆ ನಾನು ತಯಾರಿದ್ದೇನೆಂದು ಇವರೇ ಹೇಳಿದ್ದಾರೆ. ಎರಡು ಸಾರಿ ಆಡಿಟ್ ರಿಪೋರ್ಟ್‌ನಲ್ಲಿ ಇವರ ಹೆಸರು ಬಂದ ಮೇಲೆ Balance Sheetಗೆ ತರಬಾರದೆಂದು Section 64 ನಲ್ಲಿ ತನಿಖೆ ಮಾಡಬಾರ ದೆಂದು ಸ್ಟೇ ತಂದವರು ಯಾರು?

---

xxxxx (ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ)

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಏತಕ್ಕೋಸ್ಕರ ಸ್ಪೇತಂದಿದ್ದೇನೆಂದರೆ, ಇದರಲ್ಲಿ ಮಾಡಿರುವ ಆರೋಪಗಳೆಲ್ಲ ಸಂಪೂರ್ಣ ಸುಳ್ಳು, ನನ್ನ ಮೇಲೆ ಯಾವುದೇ ಆರೋಪ ಇಲ್ಲ. ನಮ್ಮಲ್ಲಿ ಕೆಲವು ನಿರ್ದೇಶಕರು ವಿದೇಶಕ್ಕೆ ಹೋಗಿರುವುದಕ್ಕೆ.....

(ಗೊಂದಲ)

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ತಾವು ಈಗಾಗಲೇ ಹೇಳಿದ್ದೀರಿ. ಈಗ ಮಾನ್ಯ ಸಚಿವರು ಉತ್ತರ ಹೇಳಲಿ. ಅವರಿಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಅವ್ಯವಹಾರ ನಡೆದಿರುವ ಬಗ್ಗೆ ಒಂದು ಬುಕ್‌ಲೆಟ್ ಮಾಡಲಾಗಿದೆ. ಬೇಕಾದರೆ ಅದನ್ನು ಕಳುಹಿಸಿ ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಅವರು ಸುಳ್ಳು ಹೇಳುತ್ತಿದ್ದಾರೆ. ಅವರು ರಾಜೀನಾಮೆ ಕೊಡಬೇಕು.

ಅಧ್ಯಕ್ಷರು : ಯಾರು ರಾಜೀನಾಮೆ ಕೊಡಬೇಕು?

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಹಾಸನದಲ್ಲಿರುವ ಕೆ.ಎಂ.ಎಫ್. ನಲ್ಲಿ ಅವ್ಯವಹಾರ ನಡೆದಿದೆ. ಇದರ ಬಗ್ಗೆ ಕೂಡ ತನಿಖೆ ನಡೆಯುತ್ತಿದೆ. ಅದರ ಬಗ್ಗೆ ಕೂಡ ನಡೆಯಲಿ ಮತ್ತೆ ಕೆಲವು ಸೊಸೈಟಿ ಬಗ್ಗೆ ಹೇಳಿದ್ದಾರೆ. ಒಂದು ಸೊಸೈಟಿ ಅಲ್ಲ, ಎಲ್ಲಾ ಸೊಸೈಟಿ ಬಗ್ಗೆ ತನಿಖೆಯನ್ನು ಮಾಡಿಸಿ ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡುವುದು ನನ್ನ ಕರ್ತವ್ಯ. ಇದರಲ್ಲಿ ಯಾರನ್ನೂ ಸ್ಪೇರ್ ಮಾಡುವುದಿಲ್ಲ, ಖಂಡಿತವಾಗಿಯೂ ಎಲ್ಲೆಲ್ಲಿ ದುರುಪಯೋಗವಾಗಿದೆಯೋ ಅದರ ಬಗ್ಗೆ ಆಕ್ಷನ್ ತೆಗೆದುಕೊಳ್ಳುತ್ತೇವೆ. ಆದರೆ ಈ ದುರುಪಯೋಗದ ಹಿನ್ನೆಲೆಯಲ್ಲಿ ನಾನೊಂದು ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದೇನೆಯೇ ಹೊರತು, ಬೇರೆ ಏನೂ ಇಲ್ಲ, ಪತ್ರಿಕೆಯಲ್ಲಿ ಬಂದಿರುವುದಕ್ಕೆ ಇದು ನನ್ನ ಉತ್ತರ. ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ನಮಸ್ಕಾರಗಳು, ಧನ್ಯವಾದಗಳು.....

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ. ರೇವಣ್ಣನವರು ಸದನದ ಬಾವಿಗೆ ಬಂದು ಮಾತನಾಡುತ್ತಿದ್ದರು.)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಅವರು ವಾಪಸ್ ತೆಗೆದು ಕೊಳ್ಳದೆ ಹೋದರೆ, ಅವರು ರಾಜೀನಾಮೆ ಕೊಡಬೇಕಾಗುತ್ತದೆ.

ಅಧ್ಯಕ್ಷರು : ವೆರಿಫೈ ಮಾಡುತ್ತೇನೆ, ನಾನು ನೋಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಮಾಹಿತಿಯನ್ನು RTI ಮೂಲಕ ತೆಗೆದುಕೊಂಡಿದ್ದೇನೆ, ಅವರು ರಾಂಗ್ ಇನ್‌ಫರ್ಮೇಶನ್ ಕೊಟ್ಟಿದ್ದಾರೆ.

ಅಧ್ಯಕ್ಷರು : RTI ನಲ್ಲಿ ನೀವು ಕೇಳಿದಷ್ಟು ಕೊಡುತ್ತಾರೆ. ಈಗ ಆಡಿಟ್ ರಿಪೋರ್ಟ್ ಅನ್ನು ವೆರಿಫೈ ಮಾಡಬೇಕಾ, RTI ರಿಪೋರ್ಟ್ ಅನ್ನು ನೋಡಬೇಕಾ? ನೀವು RTI ನಲ್ಲಿ ಕೇಳಿದ್ದನ್ನು ರಿಲೈ ಮಾಡಬೇಕೆಂದರೆ, ಅದು ಏನು ಅರ್ಥ? ಕಾನೂನು ಎನ್ನುವುದು ಏನೂ ಇಲ್ಲವೇ? RTI ನಲ್ಲಿ ಏನೋ ಕೊಟ್ಟರೆಂದರೆ, is it authenticated?

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಇದೇ ರೀತಿ ಇವರು ಮಿಸ್‌ಗೈಡ್ ಮಾಡುವುದು, ಬೇಕಾದರೆ ಅವರು ಕೋರ್ಟಿಗೆ ಹೋಗಿ ಕ್ಲೀನ್ ಚಿಟ್ ತೆಗೆದು ಕೊಂಡು ಬರಲಿ, ಕೋರ್ಟಿನಲ್ಲಿ ಎನ್‌ಕ್ವೈರಿ ನಡೆಯಬಾರದೆಂದು ಸ್ಟೇ ತೆಗೆದು ಕೊಂಡು ಬಂದಿದ್ದಾರೆ.

ಅಧ್ಯಕ್ಷರು : ನಾನು ವೆರಿಫೈ ಮಾಡಿಸುತ್ತೇನೆ, ನೀವು ತಮ್ಮ ಸ್ಥಾನಕ್ಕೆ ತೆರಳಿ, ನಾನು ಬಿಲ್ ತೆಗೆದುಕೊಳ್ಳುತ್ತೇನೆ, ನೀವು ಯಾರೂ ಮಾತನಾಡು ವುದಿಲ್ಲವೆ?

ಶ್ರೀ ಸಿದ್ದರಾಮಯ್ಯ : ಇದೆಲ್ಲ ಕೋಳಿ ಜಗಳ.

ಶ್ರೀ ಆರ್. ಅಶೋಕ್ : ಸಭಾಧ್ಯಕ್ಷರೆ, ವಿಧಾನ ಪರಿಷತ್ತಿನಲ್ಲಿ ಬಿಲ್ ಪಾಸ್ ಆಗಿದೆ, ದಯವಿಟ್ಟು, ಅದೊಂದು ಬಿಲ್ ಅನ್ನು ತೆಗೆದುಕೊಳ್ಳಿ ನಂತರ ಮಾತನಾಡಲಿ.....

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಹೆಚ್.ಡಿ. ರೇವಣ್ಣನವರು ತಮ್ಮ ಆಸನಕ್ಕೆ ತೆರಳಿ ಮಾತನಾಡಲು ಆರಂಭಿಸಿದರು)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಮಂತ್ರಿಗಳು RTI ನಲ್ಲಿರುವ ಮಾಹಿತಿಗೆ ವಿರುದ್ಧವಾಗಿ ಮಾಹಿತಿಯನ್ನು ನೀಡುತ್ತಿದ್ದಾರೆ.....

(ಗೊಂದಲ)

ಅಧ್ಯಕ್ಷರು : RTIನದ್ದು ಇಟ್ಟುಕೊಂಡು ನೀವು ಏನೋ ಹೇಳಿಕೊಂಡು ಇದ್ದರೆ ಇಲ್ಲಿ ಆಗುವುದಿಲ್ಲ, ನೀವೇನು ಕೇಳಿರುತ್ತಿರೋ ಅದನ್ನು ಕೊಟ್ಟಿರುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ : ಸರ್, ಮಾನ್ಯ ಮಂತ್ರಿಗಳು ಪತ್ರಿಕೆಯಲ್ಲಿ ಹೇಳಿರುವುದಕ್ಕೆ ಸಂಬಂಧಿಸಿದಂತೆ ಇಲ್ಲಿ ಸುಳ್ಳು ಹೇಳುತ್ತಿದ್ದಾರೆ.

ಅಧ್ಯಕ್ಷರು : ನೀವು ಇದನ್ನು ಪತ್ರಿಕೆಗೆ ಕೊಡಿ. ಯಾರು ಬೇಡವೆಂದು ಹೇಳಿದರು?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳು, ವಿಧಾನ ಸಭೆಯಲ್ಲಿ ಉತ್ತರ ಕೊಟ್ಟಿರುವುದು, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ನಿಮಗೆ ಎಷ್ಟು ಬೇಕೋ ಅಷ್ಟನ್ನು RTI ನಲ್ಲಿ ತೆಗೆದುಕೊಂಡಿರುತ್ತೀರಿ.

ಶ್ರೀ ಹೆಚ್.ಡಿ. ರೇವಣ್ಣ : ವಿಧಾನಸಭೆಯಲ್ಲಿ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ಅದನ್ನೇ ಓದುತ್ತೇನೆ, ಅವರು ಹೇಳಿದ್ದಾರಲ್ಲ? ನನಗೆ ಮಾತನಾಡಲು ಅವಕಾಶ ಕೊಡಿ. ನನ್ನ ಮೇಲೆ without notice, ನೊಟೀಸ್ ಇಲ್ಲದೆ, ಅವರು ಹೇಳಿಕೆ ಕೊಟ್ಟಿದ್ದಾರೆ.....

(ಗೊಂದಲ)

ಅಧ್ಯಕ್ಷರು : ಈ ರೀತಿಯ ಜಗಳವನ್ನು ಇಲ್ಲಿ ಕೇಳಿಕೊಂಡು ಕುಳಿತು ಕೊಳ್ಳುವುದಕ್ಕೆ ತಯಾರಿಲ್ಲ, ನೀವು ಅದನ್ನು ಪತ್ರಿಕೆಗೆ ಹೇಳಿಕೊಳ್ಳಿ, ಆಯಿತು, ಕ್ಲ್ಯಾರಿಫೈ ಮಾಡಿ..

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿನ ಪ್ರಶ್ನೆ ಸಂ: 11, ಉತ್ತರ, ವಿಧಾನಸಭೆ ಸದಸ್ಯರು, ಕೆ.ಎಂ.ಶಿವಲಿಂಗೇಗೌಡರು (ಅರಸೀಕೆರೆ) ದಿ: 25.12.2012, ಕೆ.ಎಂ.ಎಫ್. ಅವ್ಯವಹಾರ ನಡೆದಿರುವುದು, ಸಹಕಾರಿ ಸಂಘದ ಮಟ್ಟದಲ್ಲಿ ಉತ್ತರಿಸಬೇಕಾದ ಪ್ರಶ್ನೆ. ದಿನಾಂಕ ಹನ್ನೊಂದು ಎರಡುಸಾವಿರದ ಹನ್ನೊಂದು, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಕೆ.ಎಂ.ಎಫ್. ಗೆ ಸಂಬಂಧಿಸಿದಂತೆ 300–400 ಕೋಟಿಗಳ ಅವ್ಯವಹಾರ

ನಡೆದಿದೆ ಎಂದು ಹೇಳಿರುವುದು ನಿಜವಲ್ಲವೇ? ಸರ್ಕಾರದ ಮಟ್ಟದಲ್ಲಿ ಉತ್ತರಿಸಬೇಕಾಗಿದೆ ಅದಕ್ಕಾಗಿ ಇತ್ತೀಚಿನ ಲೆಕ್ಕಪರಿಶೋಧಕರ ನಿರ್ದೇಶಕರಿಂದ ಬಂದಿರುವ 2001, 2007ನೇ ಸಾಲಿನ ಮರುಪಾವತಿ ಪರಿಶೀಲನೆ ವರದಿಯಲ್ಲಿ ಕೆ.ಎಂ.ಎಫ್. ಮತ್ತು ಅದರ ಘಟಕಗಳಲ್ಲಿ ನಡೆದಿರುವ ಅವ್ಯವ ಹಾರಗಳ ಪ್ರಮಾಣ ಕೆಳಗಿನಂತಿದೆ. ಅದರಲ್ಲಿ ಡೆಂಪೊ ಡೈರಿ ಬಾಗಲ ಕೋಟೆ, 65 ಲಕ್ಷ, ಅದು ನನಗೆ ಬರುವುದಿಲ್ಲ, ಆರ್ಥಿಕ ನಷ್ಟ ರೂ.1 ಕೋಟಿ, 74 ಲಕ್ಷ ಎಂದು ಆಡಿಟ್ ವರದಿಯಲ್ಲಿದೆ, ನನ್ನ ವ್ಯಾಪ್ತಿಗೆ ಡೆಂಪೊ ಡೈರಿ ಬರುವುದಿಲ್ಲ. ಕೆ.ಎಂ.ಎಫ್ ಇದರಲ್ಲಿ ಕೆಲವು ಅಧಿಕಾರಿಗಳು ಮಾರಾಟ ಮಾಡಿದ್ದರಲ್ಲಿದೆ ಎಂದು ಅಲ್ಲಿಂದ ಬರೆಸಿರುವುದು. ಮತ್ತೆ 2007–2009ನೇ ಸಾಲಿನಲ್ಲಿ ನೇರ ನೇಮಕಾತಿ ಲಿಖಿತ ಪರೀಕ್ಷೆ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವುದಕ್ಕೆ ಮೌಲ್ಯಮಾಪನ ಅಧಿಕ ಮೊತ್ತವನ್ನು ಆಡಳಿತ ಮಂಡಳಿಯವರ ಅನುಮೋದನೆ ಪಡೆಯದೆ ನಷ್ಟವುಂಟುಮಾಡಿರುವ ಬಗ್ಗೆ, ಅದರಲ್ಲಿ ಏನು ಹೇಳಿದ್ದಾರೆ, ಆಡಳಿತ ಮಂಡಳಿಯ ಸದಸ್ಯರು ವಿದೇಶ ಅಧ್ಯಯನ ಪ್ರವಾಸಕ್ಕೆ ಒಟ್ಟು ರೂ.34 ಲಕ್ಷ ಖರ್ಚು ಮಾಡಲಾಗಿದ್ದು ಸದರಿ ವೆಚ್ಚದಲ್ಲಿ ರೂ. 25 ಲಕ್ಷ, ತಲಾ ರೂ.63,000 ದಂತೆ 12 ಜನ ನಿರ್ದೇಶಕರು, ರಾಮಲಿಂಗೇಗೌಡ, ಸಿ.ಎಂ. ಮಂಜುನಾಥ್, ನಿರ್ದೇಶಕರು ಇನ್ನೊಂದು ಅನವತ್ ಉದ್ದರ್, ಆರ್.ಎಸ್. ಪಾಟೀಲ್, ದಿವಾಕರ್ ಶೆಟ್ಟಿ, ಹಿರೇಗೌಡ, ರಮೇಶ್, ಮಾರುತಿ ಕೆಂಪೇಗೌಡ, ಜಿ. ಜವರೇಗೌಡ, ಕೆ.ಪಿ. ರೇವಣಸಿದ್ದಪ್ಪ, ಸತ್ಯನಾರಾಯಣ, ಎ.ಟಿ. ಸೋಮಶೇಖರ್, ಎ.ರಾಜಗೋಪಾಲ್ ಅವರಿಂದ ತಲಾ ರೂ.43,000 ವಸೂಲಿ. ಕೆ.ಎಂ.ಎಫ್.ನ ಯಾವುದಾದರೂ ಒಂದು ನನ್ನ ಹೆಸರಿನಲ್ಲಿ ಇದ್ದರೆ, ಇಲ್ಲೇ ನನ್ನ ಆಡಿಟ್ ವರದಿಯನ್ನು ತೆಗೆದುಕೊಳ್ಳಿ ನಾನು ಕೊಟ್ಟುಬಿಡುತ್ತೇನೆ, 2001 ರಿಂದ 15 ಸಾರಿ ಯಡಿಯೂರಪ್ಪನವರು ಎನ್‌ಕ್ವೈರಿ ಮಾಡಿಸಿದ್ದಾರೆ. ಈ ರಾಜ್ಯದಲ್ಲಿರುವವರು ಆ ಸಂಸ್ಥೆಯಲ್ಲಿ ಐದು ರೂಪಾಯಿ ದುಡ್ಡು ನಾನು ತಿಂದಿದ್ದೇನೆಂದರೆ.. (ಗೊಂದಲ) ನಾನು ನನ್ನ ಜೀವನದಲ್ಲಿ, ಹತ್ತು ಪೈಸೆಯ ಟಿಎ, ಡಿಎ ಆಗಲಿ ತೆಗೆದುಕೊಂಡಿಲ್ಲ, ನಾನು ಟಿಎ.ಡಿಎ, ತೆಗೆದುಕೊಳ್ಳದೆ, ನಷ್ಟದಲ್ಲಿದ್ದ ಆ ಒಂದು ಸಂಸ್ಥೆಯನ್ನು ಇವತ್ತು ಆ ಮಟ್ಟಕ್ಕೆ ತಂದಿರುವುದಕ್ಕೆ ಇವತ್ತು ಪುಟ್ಟಸ್ವಾಮಿಯವರು ನನ್ನ ಮೇಲೆ ಈ ರೀತಿ ಹೇಳುತ್ತಿದ್ದಾರೆ. ನಾನಲ್ಲ, ಇವತ್ತು ಮಾನ್ಯ ಮಂತ್ರಿಗಳು ಸದನಕ್ಕೆ ಕೊಟ್ಟಂಥ ಉತ್ತರ. ಮಂತ್ರಿಗಳೆ, ದಯಮಾಡಿ ಹೇಳಿ, ನನ್ನ ಆಡಿಟ್ ರಿಪೋರ್ಟ್‌ಅನ್ನು ಕೊಡುತ್ತೇನೆ, ಸದನಕ್ಕೆ

ಸುಳ್ಳು ಉತ್ತರವನ್ನು ಕೊಟ್ಟಿದ್ದಾರೆ, ಮಂತ್ರಿಗಳು ಈ ಕೂಡಲೇ ರಾಜಿನಾಮೆ ಯನ್ನು ಕೊಡಬೇಕಾಗುತ್ತದೆ.....

(ಗೊಂದಲ)

ಅಧ್ಯಕ್ಷರು : ಡಾಕ್ಯುಮೆಂಟ್ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ : ಈ ಡಾಕ್ಯುಮೆಂಟ್ ಅನ್ನು ತಮಗೆ ಕಳುಹಿಸಿಕೊಡುತ್ತೇನೆ. ನೀವು, ಈ ಸದನ ಮುಗಿಯುವುದರೊಳಗೆ ಉತ್ತರ ಕೊಡಬೇಕಾಗುತ್ತದೆ. ಮಂತ್ರಿಗಳು ಈ ಸದನಕ್ಕೆ ಕೊಟ್ಟಂಥ ಉತ್ತರ ಸುಳ್ಳು ಎನ್ನುವುದಾದರೆ, ಮಂತ್ರಿಗಳ ಮೇಲೆ ಹಕ್ಕುಚ್ಯುತಿಯನ್ನು ಹಾಕಬೇಕಾಗುತ್ತದೆ. ಏಕೆಂದರೆ ವಿಧಾನ ಸಭೆಯಲ್ಲಿ ನನಗೆ ನೋಟಿಸ್ ಕೊಡದೆ ಮಂತ್ರಿಗಳು ಚಾರ್ಜ್ ಮಾಡಿದ್ದಾರೆ, ಅಧಿಕಾರ ದುರುಪಯೋಗ ಪಡಿಸಿಕೊಂಡು, ರಾಜಕೀಯ ದುರುದ್ದೇಶದಿಂದ ಮಂತ್ರಿಗಳು ಸುಳ್ಳು ಹೇಳಿಕೆಯನ್ನು ಕೊಟ್ಟಿದ್ದಾರೆ, ಸದನದ ಮುಂದೆ ನಾನು ಹಕ್ಕುಚ್ಯುತಿಯನ್ನು ಮಂಡಿಸು ತ್ತಿದ್ದೇನೆ. ಸಾರ್ವಜನಿಕವಾಗಿ ಇವತ್ತು ಇವರೇನು ಹೇಳಿಕೆಯನ್ನು ಕೊಟ್ಟಿದ್ದರೆ, ಇದನ್ನೆಲ್ಲಾ ನೋಡಿಕೊಂಡು, ಇವತ್ತು ಮಂತ್ರಿಗಳು ನೇರವಾಗಿ ನನ್ನ ಹೆಸರನ್ನು ಪ್ರಸ್ತಾಪ ಮಾಡಿರುವುದರಿಂದ, ಅವರ ಮೇಲೆ ಹಕ್ಕುಚ್ಯುತಿ ನಿರ್ಣಯ ಮಂಡನೆ ಮಾಡುವುದಕ್ಕೆ ನನಗೆ ಅನುಮತಿ ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಮಂಡಿಸಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಸಹಕಾರ ಮಂತ್ರಿಗಳು ಸದನದ ಒಬ್ಬ ಸದನದ ಸದಸ್ಯರ ಮೇಲೆ ನೇರವಾಗಿ ಆಪಾದನೆ ಮಾಡಿದ್ದಾರೆ, ಇವತ್ತು ಇದು ಕೋರ್ಟಿನಲ್ಲಿರುವಂಥ ಕೇಸ್, ಸದನಕ್ಕೆ ತಪ್ಪು ಉತ್ತರವನ್ನು ಕೊಟ್ಟಿದ್ದಾರೆ, ಆದುದರಿಂದ ನಾನು ಹಕ್ಕುಚ್ಯುತಿಯನ್ನು ಮಂಡಿಸುತ್ತಿದ್ದೇನೆ, ನೀವು ಹಕ್ಕುಚ್ಯುತಿಗೆ ಕಳುಹಿಸಿಕೊಡಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು : ನೀವು ಡಾಕ್ಯುಮೆಂಟ್ ಕೊಡಿ, ನಾನು ವೆರಿಫೈ ಮಾಡುತ್ತೇನೆ, ನೀವು ವೆರಿಫೈ ಮಾಡುವುದಕ್ಕೂ ಅವಕಾಶ ಕೊಡದಿದ್ದರೆ ಏನು ಮಾಡಬೇಕು ಹೇಳಿ, ಡಾಕ್ಯುಮೆಂಟ್ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ : ಈಗ ಕಳುಹಿಸಿಕೊಡುತ್ತೇನೆ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ರೇವಣ್ಣನವರು ಡಾಕ್ಯುಮೆಂಟ್ ಅನ್ನು ಮಾನ್ಯ ಅಧ್ಯಕ್ಷರಿಗೆ ನೀಡಿದರು.)

2. ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಯ್ಕೆಯಾಗಿರತಕ್ಕ ಶಾಸಕರುಗಳು ಪ್ರತಿನಿತ್ಯ ಜನರನ್ನು ಬೇಟಿ ಮಾಡಿ ಪ್ರಾಮಾಣಿಕವಾಗಿ ಸ್ಪಂದಿಸುವ ಬಗ್ಗೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮೀ ಲೇಔಟ್) : ಮಾನ್ಯ ಅಧ್ಯಕ್ಷರೆ, ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದಲ್ಲಿ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ವಿಶೇಷವಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಯ್ಕೆಯಾಗಿ ರತಕ್ಕಂಥ ಶಾಸಕರುಗಳು ಜನರಿಗೆ ಪ್ರತಿನಿತ್ಯ ಅವರನ್ನು ಭೇಟಿ ಮಾಡತಕ್ಕಂಥ ಸಂದರ್ಭದಲ್ಲಿ ಅವರಿಗೆ ಪ್ರಾಮಾಣಿಕವಾಗಿ ಸ್ಪಂದನೆ ಮಾಡತಕ್ಕಂಥ ವಿಚಾರದಲ್ಲಿ, ದಿನನಿತ್ಯ ಜನರಿಗೆ ಮತ್ತು ಜನರ ಮತ ಕ್ಷೇತ್ರದ ಕುಂದು-ಕೊರತೆಗಳು ಮತ್ತು ಅಭಿವೃದ್ಧಿ ಕೆಲಸಗಳ ಬಗ್ಗೆ ಇವತ್ತು ಜನರು ಬಹಳಷ್ಟು ನಿರೀಕ್ಷಣೆಯನ್ನು ಇಟ್ಟುಕೊಂಡಿದ್ದಾರೆ. ಆದರೆ ಆ ನಿರೀಕ್ಷಣೆಗೆ ತಕ್ಕಹಾಗೆ ನಮಗೆ ಸ್ಪಂದನೆ ಮಾಡಲಿಕ್ಕೆ ಕಷ್ಟಸಾಧ್ಯವಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ಉಲ್ಲೇಖವನ್ನು ಮಾಡಲಿಕ್ಕೆ ಬಯಸುತ್ತೇನೆ. ಇವತ್ತು ಕರ್ನಾಟಕ ಸರ್ಕಾರದಲ್ಲಿ highway ಗಾಗಿ ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದನ್ನು ನಾವು ನೋಡಿದ್ದೇವೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 10 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಖರ್ಚು ಮಾಡತಕ್ಕಂತದ್ದನ್ನು ನೋಡಿದ್ದೇವೆ. ಮಹಾನಗರ ಪಾಲಿಕೆಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಇವತ್ತು ಅಭಿವೃದ್ಧಿಯ ದಿಕ್ಕಿನಲ್ಲಿ ಕೆಲಸ ಮಾಡಿಸಲಿಕ್ಕೆ ನೀಡಿರತಕ್ಕಂಥದ್ದೂ ಸಹ ನಮ್ಮ ಗಮನಕ್ಕೆ ಬಂದಿದೆ ಮತ್ತು ನಾವು ನಗರದ ಶಾಸಕರಾಗಿ, ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಇರಬಹುದು, ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ಇರಬಹುದು, ಬಹುಶಃ 80 ಲಕ್ಷ ಜನಕ್ಕೂ ಹೆಚ್ಚು ವ್ಯಾಪ್ತಿ ಇರತಕ್ಕಂಥ, 28 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿ ಇರತಕ್ಕ ಜನಗಳಿಗೆ ನಾವು ಪ್ರತಿನಿತ್ಯ ಕ್ಷೇತ್ರಗಳಿಗೆ ಭೇಟಿ ನೀಡಿದಾಗ ಮತ್ತು ಕ್ಷೇತ್ರಗಳಲ್ಲಿ ಜನರು ಸಮಸ್ಯೆಗಳನ್ನು ಹೇಳಿದಾಗ, ಅದನ್ನು ಸ್ಪಂದನೆ ಮಾಡಲಿಕ್ಕೆ ನಿಜವಾಗಿಯೂ ಬಹಳ ಕಷ್ಟಸಾಧ್ಯವಾಗಿದೆ. ಬಹುಶಃ 'ದೂರದ ಬೆಟ್ಟ ನುಣ್ಣಗೆ' ಎಂದ ಹಾಗೆ, ಬೆಂಗಳೂರು ನಗರದ ಶಾಸಕರು